ಶ್ರೀ ಎಂ.ಪಿ. ಪ್ರಕಾಶ್ (ಕಂದಾಯ ಸಚಿವರು) : ಮಾನ್ಯ ಅಧ್ಯಕ್ಷರೆ, ಇಲಾಖೆಗಳಲ್ಲಿ ಈ ತರಹದ ನಡವಳಿಕೆಗಳು ಇರುತ್ತವೆ. ನಾವು ನೇರವಾಗಿ ದುಡ್ಡು ಕೊಡಲಿ ಎಂದು ಹೇಳಿದರೂ ಕೂಡ ಅಂತರ ಇಲಾಖೆಯಲ್ಲಿ ಆ ಪುಸ್ತಕದಲ್ಲಿ ಲೆಕ್ಕಾಚಾರ ಮಾಡಬೇಕಾಗುತ್ತದೆ, ಆ ದೃಷ್ಟಿಯಿಂದ ಆ ವಿಚಾರದಲ್ಲಿ ಲೋಕೋಪಯೋಗಿ ಇಲಾಖೆ ಸ್ವಲ್ಪ ಹಣವನ್ನು ತೆಗೆದು ಇಡಬೇಕಾಗುತ್ತದೆ. ರಸ್ತೆ ಅಗಲೀಕರಣ ಮಾಡುವ ಸಂದರ್ಭ ಅಥವಾ ಅದನ್ನು ಸ್ಥಳಾಂತರ ಮಾಡಬೇಕು ಎನ್ನುವ ಸಂದರ್ಭದಲ್ಲೂ ಕೂಡ ಹಣವನ್ನು ಕಟ್ಟಬೇಕಾಗುತ್ತದೆ. ಹಾಗೇನಾದರೂ ತಮ್ಮ ಹತ್ತಿರ ನಿರ್ದಿಷ್ಟ ಪ್ರಕರಣಗಳು ಇದ್ದರೆ ಅದನ್ನು ಖಂಡಿತವಾಗಿಯೂ ಮಾನ್ಯ ಮಂತ್ರಿಗಳಿಗೆ ತಿಳಿಸುತ್ತೇನೆ, ತಾವು ದಯಮಾಡಿ ಅದನ್ನು ಕೊಡಿ.

ವಿಷಯ : ಅಂಗವಿಕಲರಿಗೆ ಕರ್ನಾಟಕ ರಾಜ್ಯ ರಸ್ತೆಸಾರಿಗೆ ಸಂಸ್ಥೆಯ ಮೂಲಕ ಉಚಿತವಾಗಿ ಪಾಸ್ ನೀಡುವ ಬಗ್ಗೆ.

ಶ್ರೀ ವಾಟಾಳ್ ನಾಗರಾಜ್ (ಚಾಮರಾಜ ನಗರ) : ಮಾನ್ಯ ಅಧ್ಯಕ್ಷರೆ, ಅಂಗವಿಕಲರಿಗೆ ವಿಶೇಷವಾದ ಸ್ಥಾನಮಾನ ಗೌರವ ಕೊಡಬೇಕೆಂದು ಕೇಂದ್ರ ಸರ್ಕಾರ ಅನೇಕ ಕಡೆಗಳಲ್ಲಿ ರಾಜ್ಯ ಸರ್ಕಾರಗಳಿಗೆ ಹೇಳಿದೆ. ಆದರೆ ಕರ್ನಾಟಕ ರಾಜ್ಯದಲ್ಲಿ ಅಂಗವಿಕಲರಿಗೆ ಕರ್ನಾಟಕ ರಾಜ್ಯ ರಸ್ತೆ ಸಾರಿಗೆಯ ಸಂಸ್ಥೆಯ ಮೂಲಕ ಉಚಿತವಾಗಿ ಬಹಳ ಹಿಂದೆ ಪಾಸ್ ಕೊಟ್ಟಿದ್ದರು. ಮಾನ್ಯ ಪ್ರಕಾಶ್‌ರವರೇ ತಾವು ಇದನ್ನು ಮಾಡಿದ್ದು. ಆಗ ಅವರು ಇಡೀ ರಾಜ್ಯಾದ್ಯಂತ ಉಚಿತವಾಗಿ ಓಡಾಡುತ್ತಿದ್ದರು. ಆದರೆ ಈಗ ವರ್ಷಕ್ಕೆ 250 ರೂಪಾಯಿ ಕಟ್ಟಬೇಕು ಹಾಗೂ 100 ಕಿಲೋ ಮೀಟರ್ ಮಾತ್ರ ಓಡಾಡಬೇಕು ಎಂದು ನಿಗದಿಪಡಿಸಿದೆ. ಇದನ್ನು ತಾವು ತೆಗೆದು ಹಾಕಿ ಉಚಿತವಾಗಿ ಇಡೀ ರಾಜ್ಯಾದ್ಯಂತ ಓಡಾಡುವಂತೆ ಮಾಡಬೇಕು ಹಾಗೂ ಆ 100 ಕಿಲೋ ಮೀಟರ್ ಏನು ಇದೆ ಅದನ್ನು ತೆಗೆದು ಹಾಕತಕ್ಕಂಥದ್ದು ಹಾಗೂ 250 ರೂಪಾಯಿ ದುಡ್ಡು ಕಟ್ಟುವುದನ್ನು ಸಂಪೂರ್ಣವಾಗಿ ತೆಗೆದು ಹಾಕಬೇಕು. ಇದಕ್ಕೆಲ್ಲ ವರ್ಷಕ್ಕೆ ಒಂದು ಕೋಟಿ ರೂಪಾಯಿ ಲಾಭ ಬರುವುದಿಲ್ಲ. ಅದಕ್ಕಾಗಿ ಈ ದೃಷ್ಟಿಯಿಂದ ತಾವು ಏನು ಉದಾತ್ತವಾದ ಒಂದು ಉದ್ದೇಶ ಇಟ್ಟುಕೊಂಡಿದಿರಿ ಅದಕ್ಕೆ ಭಂಗ ಬರುತ್ತದೆ, ಆದುದರಿಂದ ದಯಮಾಡಿ ಎಲ್ಲಾ ಕಡೆ ಉಚಿತವಾಗಿ ಓಡಾಡುವಂಥದ್ದು ಹಾಗೂ 250 ರೂಪಾಯಿ ಕಟ್ಟುವ ವಿಚಾರದ ಬಗ್ಗೆ ಅದನ್ನು ರದ್ದು ಮಾಡುವ ಬಗ್ಗೆ ತಾವು ತೀರ್ಮಾನ ತೆಗೆದುಕೊಳ್ಳಬೇಕು.

ಶ್ರೀ ಎಂ.ಪಿ. ಪ್ರಕಾಶ್ (ಕಂದಾಯ ಸಚಿವರು) : ಮಾನ್ಯ ಅಧ್ಯಕ್ಷರೇ 83ನೇ ಸಾಲಿನಲ್ಲಿ ನಾನು ಸಾರಿಗೆ ಮಂತ್ರಿಯಾಗಿದ್ದ ಸಂದರ್ಭದಲ್ಲಿ ಈ ಅಂಧರಿಗೆ, ಅಂಗವಿಕಲರಿಗೆ ಹಾಗೂ ವಿದ್ಯಾರ್ಥಿಗಳಿಗೆ ಹಾಗೂ ಸಮಾಜ ಸೇವಕರಿಗೂ ಕೂಡ ಈ ಬಸ್ ಪಾಸ್ ಅನ್ನು ಕೊಡುತ್ತಿದ್ದೇವೆ. ಈಗ 250 ರೂಪಾಯಿ ಯಾವ ಕಾರಣಕ್ಕಾಗಿ ಹಾಕಿದ್ದಾರೆ ನನಗೆ ಗೊತ್ತಿಲ್ಲ. ಹಿರಿಯ ಸಚಿವರಾದಂಥ ಮಾನ್ಯ ಮಲ್ಲಿಕಾರ್ಜುನ ಖರ್ಗೆಯವರ ಬಳಿ ತಮ್ಮ ಅಭಿಪ್ರಾಯವನ್ನು ವ್ಯಕ್ತ ಮಾಡಿ, ಖಂಡಿತವಾಗಿ ಆ ಸಂಸ್ಥೆಯ ಆರೋಗ್ಯ ಹಣಕಾಸಿನ ಆರೋಗ್ಯ ಚೆನ್ನಾಗಿದೆ. ಕೆಎಸ್ಆರ್‌ಟಿಸಿ ಯನ್ನು ನಾಲ್ಕು ವಿಭಾಗಗಳನ್ನಾಗಿ ಮಾಡಿದ ಮೇಲೆ ಹೈದರಾಬಾದ್ – ಕರ್ನಾಟಕದ ನೈರುತ್ಯ ವಾಯುವ್ಯ ಭಾಗದಲ್ಲಿ ಕೂಡ ಲಾಭ ಮಾಡುತ್ತಿದೆ. ಆ ಕಾರಣಕ್ಕಾಗಿ ಇಂಥ ವಿಚಾರಗಳಲ್ಲಿ ಅವರು ಸಹಾನುಭೂತಿಯ ಪರವಾಗಿ ಹಾಗೂ ಜವಾಬ್ದಾರಿಯುತವಾಗಿ ನಡೆದುಕೊಳ್ಳಬೇಕೆಂಬ ಮಾತನ್ನು ಕೂಡ ಅವರಿಗೆ ತಿಳಿಸುತ್ತೇನೆ. ಪ್ರಾಯಶಃ ಅವರು ನಿಮ್ಮ ಜೊತೆಗೆ ಮಾತನಾಡುತ್ತಾರೆ.

ಅಧ್ಯಕ್ಷರು : ಈಗ 2 ಗಂಟೆ 5 ನಿಮಿಷವಾಗಿದೆ, ಮಾನ್ಯ ಉಪ ಮುಖ್ಯಮಂತ್ರಿಗಳವರು ಬ್ಯಾಂಕ್ವೆಟ್ ಹಾಲಿನಲ್ಲಿ ಭೋಜನ ಏರ್ಪಡಿಸಿದ್ದಾರೆ, ಎಲ್ಲಾ ಸದಸ್ಯರು ಹಾಜರಾಗಬೇಕೆಂದು ನಾನು ತಮ್ಮನ್ನು ವಿನಂತಿಸುತ್ತೇನೆ. ಉಳಿದ ಸದಸ್ಯರುಗಳಿಗೆ ನಾಳೆ ಶೂನ್ಯವೇಳೆಯಲ್ಲಿ ಕಾಲಾವಕಾಶ ಕೊಡುತ್ತೇನೆ. ಮಧ್ಯಾಹ್ನ ವಿತ್ತೀಯ ಕಲಾಪ ಚರ್ಚೆಯಾಗುತ್ತದೆ ಮಾನ್ಯ ವಿರೋಧ ಪಕ್ಷದ ನಾಯಕರು ಮಾತನಾಡುತ್ತಾರೆ. ಈಗ 3 ಗಂಟೆ 10 ನಿಮಿಷಕ್ಕೆ ಸೇರುವಂತೆ ಸದನವನ್ನು ಮುಂದೂಡಲಾಗಿದೆ.

(ಸದನವು 2 ಗಂಟೆ 8 ನಿಮಿಷಕ್ಕೆ ಮುಕ್ತಾಯಗೊಂಡು
ಪುನಃ 3 ಗಂಟೆ 10 ನಿಮಿಷಕ್ಕೆ ಸಮಾವೇಶಗೊಳ್ಳಲು ನಿಶ್ಚಯಿಸಿತು)

.....